**<u>ದಿನಾಂಕಃ 06-02-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.</u>**

**<u>ಪಾಟೀ ಸವಾಲುಃ ಎದುರುದಾರರ ಪರ ಶ್ರೀಮತಿ ವೈ ವಿಡಿ ವಕೀಲರಿಂದಃ</u>**

1. ಅಪಘಾತ ಓಮಿನಿ ಮತ್ತು ಕೆ ಎಸ್ ಆರ್ ಟಿ ಸಿ ಬಸ್ ನಡುವೆ ಆಗಿರುತ್ತದೆ. ನಾನು ಮತ್ತು ನನ್ನ ಮಗ ಓಮಿನಿಯಲ್ಲಿ ಹೋಗುತ್ತಿದ್ದೆವು. ಅಪಘಾತ ಆದಾಗ ಮದ್ಯಾಹ್ನ 12 ಗಂಟೆಯಾಗಿತ್ತು. ದಿಃ 11-04-2024 ರಂದು ಅಪಘಾತ ಆಗಿರುತ್ತದೆ. ನಾನು ಓಮಿನಿಯಲ್ಲಿ ಹಿಂದಿನ ಸೀಟ್ ನಲ್ಲಿ ಕುಳಿತಿದ್ದೆ ಮತ್ತು ನನ್ನ ಮಗ ಡ್ರೈವರ್ ನ ಹಿಂಭಾಗದ ಸೀಟ್ ನಲ್ಲಿ ಕುಳಿತಿದ್ದ. ನಾನು ಹಿಂದಿನ ಸೀಟ್ ನಲ್ಲಿ ಕುಳಿತಿದ್ದರೂ ಸಹ ಎದುರಿನಿಂದ ಬರುತ್ತಿದ್ದ ವಾಹನಗಳು ಕಾಣಿಸುತ್ತಿದ್ದವು. ನಮ್ಮ ಕಾರಿನ ಚಾಲಕ ಸಾಧಾರಣ ವೇಗದಲ್ಲಿ ಹೋಗುತ್ತಿದ್ದನು. ಎದುರುರಿನಿಂದ ಕೆ ಎಸ್ ಆರ್ ಟಿ ಸಿ ಬಸ್ ಬಂದು ಡಿಕ್ಕಿ ಪಡಿಸಿರುತ್ತದೆ. ನಮ್ಮ ಕಾರಿನ ಚಾಲಕ ಮುಂದೆ ಹೋಗುತ್ತಿದ್ದ ವಾಹನವನ್ನು ಓವರ್ ಟೇಕ್ ಮಾಡಲು ಹೋಗಿ ಬಸ್ ಗೆ ಡಿಕ್ಕಿ ಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಕೆ ಎಸ್ ಆರ್ ಟಿ ಸಿ ಬಸ್ ಚಾಲಕ ರಸ್ತೆಯ ಎಡಭಾಗದಲ್ಲಿ ಹೋಗುತ್ತಿದ್ದರೂ ಸಹ ನಮ್ಮ ಚಾಲಕನೇ ವಾಹನ ಓವರಟೇಕ್ ಮಾಡಲು ಹೋಗಿ

ಬಸ್ ಗೆ ಡಿಕ್ಕಿ ಪಡಿಸಿರುತ್ತಾನೆ ಎಂದರೆ ಸರಿಯಲ್ಲ. ಈ ಅಪಘಾತ ಓಮಿನಿ ಚಾಲಕನ ತಪ್ಪಿನಿಂದ ಆಗಿರುವುದರಿಂದ ಕೆ ಎಸ್ ಆರ್ ಟಿ ಸಿ ಬಸ ನವರು ಯಾವುದೆ ಪರಿಹಾರ ಕೊಡಲು ಬಾಧ್ಯರಲ್ಲ ಎಂದರೆ ಸರಿಯಲ್ಲ.

2. ಓಮಿನಿ ಯನ್ನು ನನ್ನ ಮಾವನ ಮಗ ದೇವರಾಜ ನಡೆಸುತ್ತಿದ್ದನು. ಆತನು ಸಹ ಅಪಘಾತದಲ್ಲಿ ಮೃತ ಪಟ್ಟಿರುತ್ತಾನೆ. ಆತನಿಗೆ ಡಿ ಎಲ್ ಇತ್ತು. ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಓಮಿನಿಗೆ ಯಾವ ಕಂಪನಿಯಲ್ಲಿ ಇನ್ಸುರೆನ್ಸ ಇತ್ತು ಎಂದು ನನಗೆ ಗೊತ್ತಿರುವುದಿಲ್ಲ. ಓಮಿನಿ ಚಾಲಕ ಜೋರಾಗಿ ಹೋಗಿ ಕೆ ಎಸ್ ಆರ್ ಟಿ ಸಿ ಬಸ್ ಗೆ ಡಿಕ್ಕಿ ಪಡಿಸಿದ್ದರಿಂದ ಈ ಅಪಘಾತ ಆಗಿದೆ ಎಂದರೆ ಸರಿಯಲ್ಲ. ನನ್ನ ಮಗನ ಎಡಗೈ ಮೂಳೆ ಮುರಿತ, ಎಡಗಾಲಿನ ಮೊಣಕಾಲಿಗೆ ಪೆಟ್ಟಾಗಿರುತ್ತದೆ ಮತ್ತು ಎಡಭುಜ, ಎಡಗಾಲು ಪಾದ, ತಲೆಗೂ ಸಹ ಪೆಟ್ಟಾಗಿರುತ್ತದೆ. ನನ್ನ ಮಗನ ಕೈಗೆ ಹಾಗೂ ಮೊಣಕಾಲಿಗೆ ಆಪರೇಶನ್ ಮಾಡಿ ಒಂದು ತಿಂಗಳು ಬ್ಯಾಂಡೇಜ್ ಹಾಕಿದ್ದರು.

3. ಅಪಘಾತ ಆದ ತಕ್ಷಣ ನನ್ನ ಮಗನನ್ನು ನಂಜಪ್ಪ ಆಸ್ಪತ್ರೆ ಗೆ ಕರೆದುಕೊಂಡು ಹೋಗಿರುತ್ತಾರೆ ಅಲ್ಲಿಂದ ಮಣಿಪಾಲ್ ಕಸ್ತೂರ ಬಾ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ನಂಜಪ್ಪ ಆಸ್ಪತ್ರೆಯಲ್ಲಿ 3-4 ಗಂಟೆ ಮಾತ್ರ ಇದ್ದನು. ಅಲ್ಲಿಂದ ಅವತ್ತೆ ಕಸ್ತೂರ ಬಾ ಆಸ್ಪತ್ರೆಗೆ ಹೋಗಿರುತ್ತೇವೆ. ಅಲ್ಲಿ 1 ತಿಂಗಳು ಒಳರೋಗಿಯಾಗಿದ್ದನು. ನಂತರ 2 ನೇ ಬಾರಿಗೆ ಆಸ್ಪತ್ರೆಗೆ ದಾಖಲಾದಾಗ 15 ದಿನಗಳ ಕಾಲ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತೇನೆ. ನನ್ನ ಕಾಲು ಮಡಿಚಲು ಆಗುತ್ತಿರಲಿಲ್ಲ ಹಾಗಾಗಿ 2 ನೇ ಬಾರಿ ಆಸ್ಪತ್ರೆಗೆ ದಾಖಲಾಗಿರುತ್ತೇನೆ. 2 ನೇ ಬಾರಿಗೆ ದಾಖಲಾದಾಗ ಫಿಜಿಯೋ ತೆರಪಿ ಮಾಡಿಸಿರುತ್ತಾರೆ. ಕೊನೆಯ ಬಾರಿಗೆ ಯಾವಾಗ ಆಸ್ಪತ್ರೆಯಿಂದ ಡಿಸ್ಚಾರ್ಜ ಆಗಿರುತ್ತೇನೆ ಎಂದು ನನಗೆ ನೆನಪಿರುವುದಿಲ್ಲ. ಮಣಿಪಾಲ್ ಆಸ್ಪತ್ರೆಯಿಂದ ಡಿಸ್ಚಾರ್ಜ ಆಗಿ ಬಂದ ನಂತರ ಬೇರೆ ಎಲ್ಲೂ ಸಹ ಒಳರೋಗಿಯಾಗಿ ದಾಖಲಾಗಿರುವುದಿಲ್ಲ, ಸಾಕ್ಷಿ ಮುಂದುವರೆದು ಎಸ್ ಎಸ್ ಐ ಆಸ್ಪತ್ರೆಯಲ್ಲಿ ತೋರಿಸಿಕೊಂಡು ಬರುತ್ತಿದ್ದೆ ಎಂದು ಹೇಳುತ್ತಾರೆ. ಎಸ್ ಎಸ್ ಐ ಆಸ್ಪತ್ರೆ ಯಲ್ಲಿ ಕೇವಲ ಅಂಗನ್ಯೂನ್ಯತೆ ಪ್ರಮಾಣ ಪತ್ರ ಪಡೆಯಲು ಹೋಗಿರುತ್ತೇನೆಯೇ ಹೊರತು ಚಿಕಿತ್ಸೆ ಪಡೆಯಲು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ಎಸ್ ಎಸ್ ಐ ಆಸ್ಪತ್ರೆಯಲ್ಲಿ ನಿತಿನ್ ಎ ಬಿ ಅವರಿಂದ ಚಿಕಿತ್ಸೆ ಪಡೆದಿರುತ್ತೇನೆ. ಎಸ್ ಎಸ್ ಐ ಆಸ್ಪತ್ರೆಯಲ್ಲಿ ಎಕ್ಸರೆ , ಸ್ಕ್ಯಾನಿಂಗ್ ಮಾತ್ರೆ, ಇಂಜೆಕ್ಷನ್ ಕೊಟ್ಟಿರುತ್ತಾರೆ. ಎಸ್ ಎಸ್ ಐ ಆಸ್ಪತ್ರೆಯಲ್ಲಿ ಕೇವಲ ಅಂಗನ್ಯೂನ್ಯತೆ ಮಾತ್ರ ಪಡೆಯಲು ಹೋಗಿದ್ದೆ ಎಂದರೆ ಸರಿಯಲ್ಲ. ನಾನು ಈಗ ಸಂಪೂರ್ಣ ಗುಣಮುಖವಾಗಿದ್ದು, ದಿನನಿತ್ಯದ ಕೆಲಸ ಮಾಡಲು ಯಾವುದೆ ತೊಂದರೆ ಇಲ್ಲ ಎಂದರೆ ಸರಿಯಲ್ಲ. ನನ್ನ ಮಗ ಶಾಲೆಯಲ್ಲಿ ಯಾವುದೆ ಆಟೋಟದಲ್ಲಿ ಭಾಗವಹಿಸಲು

ಆಗುವುದಿಲ್ಲ.

4. ಅಪಘಾತ ಸಮಯದಲ್ಲಿ ನನ್ನ ಮಗ 2 ನೇ ತರಗತಿ ಓದುತ್ತಿದ್ದ. 1 ನೇ ತರಗತಿ ಮುಗಿದಿದ್ದು , 2 ನೇ ತರಗತಿಗೆ ಹೋಗಬೇಕಾಗಿತ್ತು. 2 ತಿಂಗಳು ಶಾಲೆಗೆ ಹೋಗಿರಲಿಲ್ಲ. ನಂತರ 2 ನೇ ತರಗತಿಯನ್ನು ಪೂರ್ಣಗೊಳಿಸಿರುತ್ತಾನೆ. ನನ್ನ ಮಗ ಶಾಲೆಯಲ್ಲಿ ಎಲ್ಲಾ ಆಟೋಟಗಳಲ್ಲಿ ಭಾಗವಹಿಸುತ್ತಿದ್ದ ಎನ್ನುವ ಬಗ್ಗೆ ದಾಖಲೆ ಇರುತ್ತದೆ ಅವುಗಳನ್ನು ಹಾಜರು ಪಡಿಸಲು ಯಾವುದೆ ತೊಂದರೆ ಇರುವುದಿಲ್ಲ. ನನ್ನ ಮಗನಿಗೆ ಅಪಘಾತದಿಂದಾಗಿ ಯಾವುದೆ ತೊಂದರೆ ಆಗಿಲ್ಲ ಎಂದರೆ ಸರಿಯಲ್ಲ. ಅಪಘಾತದಲ್ಲಿ ಆದ ಗಾಯದಿಂದ ಯಾವುದೆ ತೊಂದರೆ ಇಲ್ಲದೆ ಇದ್ದರೂ ಸಹ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ನನ್ನ ಮಗನ ಚಿಕಿತ್ಸೆಗಾಗಿ ರೂ.2,50,000/- ಖರ್ಚು ಮಾಡಿದ್ದು ಹಾಗೂ ಹೆಚ್ಚಿನ ಚಿಕಿತ್ಸೆಗಾಗಿ ಇನ್ನು ರೂ.1,80,000/-ಬೇಕು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ನನ್ನ ಮಗನಿಗೆ ಯಾವುದೆ ಅಂಗನ್ಯೂನ್ಯತೆ ಇಲ್ಲದೆ ಇದ್ದರೂ ಸಹ ಸುಳ್ಳು ಅಂಗನ್ಯೂನ್ಯತೆ ಪ್ರಮಾಣ ಪತ್ರ ತಂದು ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮಗನಿಗೆ ಯಾವುದೆ ಅಂಗನ್ಯೂನ್ಯತೆ ಇಲ್ಲದೆ ಇದ್ದರೂ ಸಹ ಶೇ 45 ರಷ್ಟು ಅಂಗನ್ಯೂನ್ಯತೆ ಇದೆ ಎಂದು ಸುಳ್ಳು ಪ್ರಮಾಣ ಪತ್ರ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿದ ಮೆಡಿಕಲ್ ಬಿಲ್ ಗಳಿಗೂ ನನ್ನ ಮಗನಿಗೂ ಒಂದಕ್ಕೊಂದು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಈ ಅಪಘಾತ ಸಂಪೂರ್ಣವಾಗಿ ಓಮಿನಿ ಚಾಲಕನ ತಪ್ಪಿನಿಂದ ಆಗಿದೆ ಎಂದು ಗೊತ್ತಿದ್ದರೂ ಸಹ ಮಾನ್ಯ ನ್ಯಾಯಾಲಯಕ್ಕೆ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗನ ವಯಸ್ಸು ಚಿಕ್ಕದಾಗಿರುವುದರಿಂದ ಮೂಳೆ ಮುರಿತಗಳು ಸರಿಯಾಗಿ ಜೋಡಣೆ ಆಗಿರುತ್ತವೆ ಎಂದರೆ ಸರಿಯಲ್ಲ. ಓಮಿನಿಯಲ್ಲಿ ನಿಗದಿ ಪಡಿಸಿದಕ್ಕಿಂತ ಹೆಚ್ಚಿನ ಜನರು ಪ್ರಯಾಣಿಸುತ್ತಿದ್ದರಿಂದ 2 ನೇ ಎದುರುದಾರರು ಯಾವುದೆ ಪರಿಹಾರ ಕೊಡಲು ಬಾಧ್ಯರಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

ಸಹಿ/-

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.